# ನೆನಪುಗಳ ಸುರುಳಿಯಲ್ಲಿ ವಿಷಾದ-ವಂಚನೆಯ ಮೆರವಣಿಗೆ

ನಾನು ದೇವಸ್ಥಾನಕ್ಕೆ ಹೋಗಬೇಕಿದೆ. ಎದ್ದು ಹೊರಟೆ. ದೇವರೇ, ನನ್ನನ್ನು ಕಾಪಾಡು... ಹೇ ಜೀಸಸ್, ಅಲ್ಲಾಹ್, ಹೇ ರಾಮ್... ನೀನಾ... ಇದ್ದಕ್ಕಿದ್ದಂತೆ ನಾನು ನೀನಾಳ ಹೆಸರನ್ನು ಜಪಿಸಲಾರಂಭಿಸಿದೆ. ನೀನಾ, ನೀನು ಈ ಭೂಲೋಕದಿಂದ ಹೋಗಿ ಒಂದು ಶ್ರೇಷ್ಠ ಜಗತ್ತಿನಲ್ಲಿ ಲೀನವಾಗಿರುವೆ. ನನ್ನನ್ನು ರಕ್ಷಿಸು...

ನೀನಾ ನನ್ನ ಕಲ್ಪನೆಯಲ್ಲಿ ದೇವಿಯೊಬ್ಬಳ ಸಾಕಾರ ರೂಪವನ್ನು ಧರಿಸಲಾರಂಭಿಸಿದಳು. ತಾಯಿ ದುರ್ಗೆಯ ರೂಪವನ್ನು.

ನೀನಾಳ ಚಿಕ್ಕ ಗೂಡೊಂದಿತ್ತು.

ನೀನಾಳ ನಿಧನದ ನಂತರ ಅವಳ ಮನೆಯನ್ನು ಖಾಲಿ ಮಾಡುವುದು ಅತ್ಯಂತ ಕಷ್ಟದ ಕೆಲಸವಾಗಿತ್ತು. ಅವರ ತಂದೆ ತುಂಬಾ ನೊಂದಿದ್ದರು, ಹೀಗಾಗಿ ಅವರು ಯಾವುದೇ ತೀರ್ಮಾನವನ್ನು ಕೈಗೊಳ್ಳಲು ಅಸಮರ್ಥರಾಗಿದ್ದರು. ಮನೆಯನ್ನು ಮಾರುವುದು ಅಥವಾ ಬಾಡಿಗೆಗೆ ಕೊಡುವುದು ಅಥವಾ ಸುಡುವುದು– ಯಾವುದರ ಬಗ್ಗೆಯೂ ಅವರಿಗೆ ಯೋಚನೆಯಿರಲಿಲ್ಲ. ಶೀಲಾ ದೇವಿಯವರು ಮಗಳ ಸಾವನ್ನು ಹೆಚ್ಚು ಧೈರ್ಯದಿಂದ ಸಹಿಸಿದ್ದರು. ಅವರೇ ನೀನಾಳ ಎಲ್ಲಾ ಕಾಗದ ಪತ್ರಗಳು ಮುಂತಾದವುಗಳನ್ನು ನೋಡಿಕೊಳ್ಳುತ್ತಿದ್ದರು.

ಕರೀನಾ ತನ್ನ ಪತಿ ಕಾಸ್ಪರ್‌ನೊಂದಿಗೆ ಇಂಗ್ಲೆಂಡ್‌ನಲ್ಲಿದ್ದಳು. ಇಬ್ಬರೂ ಅಲ್ಲಿಯೇ ನೌಕರಿ ಮಾಡುತ್ತಿದ್ದರು. ಈಗ ಕರೀನಾ ಗರ್ಭಿಣಿಯಾಗಿದ್ದಳು. ಜೊಹಾನಾ ಎಲ್ಲಿದ್ದಾಳೋ ತಿಳಿಯುತ್ತಿರಲಿಲ್ಲ. ಅವಳಿಗೆ ಏನಾದರೂ ಹೇಳಿದರೆ ವಾದ ಮಾಡುತ್ತಾಳೆ, ವಿಚಿತ್ರವಾಗಿ ತರ್ಕಿಸುತ್ತಾಳೆ, ಅದನ್ನೆಲ್ಲಾ ಜೀರ್ಣಿಸಿಕೊಳ್ಳುವುದು ನನ್ನಿಂದಾಗದು.

‘ಹುಡುಗರೊಂದಿಗಿದ್ದು ಏನು ಮಾಡುವುದು? ಅವರು ಹುಡುಗಿಯರ ಭಾವನೆಗಳನ್ನು ಅರ್ಥ ಮಾಡಿಕೊಳ್ಳುವುದಿಲ್ಲ. ಹುಡುಗಿಯರು ಹುಡುಗಿಯರ ಭಾವನೆಗಳನ್ನು ಅರ್ಥ ಮಾಡಿಕೊಳ್ಳುತ್ತಾರೆ, ಹೀಗಾಗಿ ಅವರೊಂದಿಗೆ ಒಳ್ಳೆಯ ಹೊಂದಾಣಿಕೆಯಾಗುತ್ತದೆ. ಪತಿ–ಪತ್ನಿಯ ಸಂಬಂಧ ತುಂಬಾ ಸುಳ್ಳು. ನನ್ನ ಮಮ್ಮಿಯನ್ನು ನೋಡಿ... ಮೂವರು ವ್ಯಕ್ತಿಗಳೊಂದಿಗೆ ಅವಳ ಸಂಬಂಧವಿತ್ತು, ಕಡೆಗೆ ಅವಳಿಗೆ ಏನು ಸಿಕ್ತು? ಯಾರೊಂದಿಗೂ ಅವರು ಇರದಾದರು. ಅವಳು ಜಗತ್ತಿನ ವ್ಯಂಗ್ಯ, ನಿಂದನೆ, ಅಪವಾದಗಳನ್ನು ಹೊತ್ತಳು. ಪ್ರತಿಕ್ಷಣವೂ ಮಾನಸಿಕ ಒತ್ತಡದಲ್ಲಿದ್ದಳು; ಕೊನೆಯಲ್ಲಿ ಅವಳಿಗೆ ಕ್ಯಾನ್ಸರ್ ತಗುಲಿತು...’ ಇದು ಜೊಹಾನಾಳ ಅಭಿಪ್ರಾಯವಾಗಿತ್ತು.

ನಾನು ತಡೆದುಕೊಳ್ಳಲಾಗದೆ ಅವಳನ್ನು ತಡೆದೆ, ‘ನಿನ್ನ ಮಮ್ಮಿಗೆ ಸಿಗರೇಟಿನಿಂದಾಗಿ ಕ್ಯಾನ್ಸರ್ ಆಯ್ತು’.

ಜೊಹಾನಾಳ ತರ್ಕ– ‘ಮನುಷ್ಯ ಸಿಗರೇಟು ಸೇದುವುದು ಏತಕ್ಕಾಗಿ? ಮದ್ಯ ಸೇವಿಸುವುದು ಏತಕ್ಕಾಗಿ?’

‘ಮದ್ಯ ಸೇವಿಸುವ ವ್ಯಕ್ತಿಗೆ ಅದರ ಚಟ ಹಿಡಿಯುತ್ತೆ’ ಎಂದೆ.

‘ಚಟ ಏಕೆ ಆಗುತ್ತೆ?’

‘ಗೊತ್ತಿಲ್ಲ...’ ನಾನು ರೇಗಿದೆ, ‘ನಾನು ಸಿಗರೇಟ್ ಸೇದಲ್ಲ, ಮದ್ಯ ಕುಡಿಯಲ್ಲ.’ ‘ಮಮ್ಮಿಗೆ ಆಮೇಲೆ ಕಷ್ಟ ಆರಂಭವಾಯಿತೆಂದು ನೀವು ತಿಳೀತೀರ...? ಮಮ್ಮಿ ಯೂರೋಪಿನಲ್ಲಿ ಭಾರತೀಯ ಪರಿವಾರವೊಂದರಲ್ಲಿ ಹುಟ್ಟಿದ ನಂತರ ಮಮ್ಮಿಯ ಯಾತನೆಗಳು ಆರಂಭಗೊಂಡಿದ್ದವು. ಅವಳ ಬಾಲ್ಯ ಹೇಗೆ ಕಳೆಯಿತು ಎಂಬುದು ನಿಮಗೆ ಗೊತ್ತಿಲ್ಲ! ಅವಳೊಂದಿಗೆ ನಿರ್ದಯತೆಯಿಂದ ವರ್ತಿಸಲಾಯಿತು, ಅವಳ ಮೇಲೆ ನಿಯಮಗಳನ್ನು ಹೇರಲಾಯಿತು! ಅವಳು ಸ್ವಿಮ್ಮಿಂಗ್ ಮಾಡಲು ಅಜ್ಜಅಜ್ಜಿ ಬಿಡುತ್ತಿರಲಿಲ್ಲ, ಅವಳು ಒಂಟಿಯಾಗಿ ಟೀವಿ ನೋಡಲು ಬಿಡುತ್ತಿರಲಿಲ್ಲ, ಅವಳು ತನ್ನ ಗೆಳತಿಯ ಮನೆಗೆ

